# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

## ಸ್ಪೆಷಲ್ ಕೇಸ್(ಪಿ.ಸಿ.) ಸಂಖ್ಯೆ: 03/2020

ಪಿಡಬ್ಲ್ಯೂ: 09
ಸಿಡಬ್ಲ್ಯೂ: 15

<u>ದಿನಾಂಕ: **20-12-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಸಾಕ್ಷಿದಾರರ ಹೆಸರು | : ಮುನೀಶ್ |
| ತಂದೆಯ ಹೆಸರು | : ಹರಭಜನ್ |
| ವಯಸ್ಸು | : 51 ವರ್ಷ |
| ಉದ್ಯೋಗ | : ಪ್ರಧಾನ ಕಾರ್ಯದರ್ಶಿ, ವಿಪತ್ತು ನಿರ್ವಹಣೆ ಇಲಾಖೆ |
| ವಾಸ ಸ್ಥಳ | : ಬೆಂಗಳೂರು |

<u>ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ:</u>

**2019** ರಲ್ಲಿ ನಾನು ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು, ಕೆ.ಆರ್. ಸರ್ಕಲ್ ಬೆಂಗಳೂರು ಇಲ್ಲಿ ಸೇವೆ ಸಲ್ಲಿಸಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಡಿಜಿಪಿ, ಎಸಿಬಿ, ಬೆಂಗಳೂರು ಇವರು ದಿನಾಂಕ **05–11–2019** ರಂದು ಸಂಪೂರ್ಣ ಕಡತವನ್ನು ಅಂದರೆ ಅಂತಿಮ ವರದಿಯನ್ನು ದಾಖಲಾತಿಗಳ ಸಮೇತ ನನಗೆ ಕಳುಹಿಸಿಕೊಟ್ಟಿದ್ದು ಮತ್ತು ಅಭಿಯೋಜನೆ ಮಂಜೂರಾತಿ ನೀಡುವಂತೆ ನನಗೆ ಕೋರಿಕೊಂಡಿದ್ದು ನಾನು ಆರೋಪಿತನ ನೇಮಕಾತಿ ಮತ್ತು ಶಿಸ್ತು ಪಾಲನಾ ಪ್ರಾಧಿಕಾರವಾದ ಕಾರಣ ಆ ಅಂತಿಮ ವರದಿಯನ್ನು ಹಾಗೂ ಅದರೊಂದಿಗೆ ಇದ್ದಂತಹ ದಾಖಲೆಗಳನ್ನು ಅಂದರೆ ಮಹಜರ್, ಸಾಕ್ಷಿದಾರರ ಹೇಳಿಕೆಗಳನ್ನು ಪರಾಮರ್ಶಿಸಿ ಆರೋಪಿ ರೂ.**500/–** ಲಂಚವನ್ನು ಪಡೆದುಕೊಳ್ಳುವ ಕಾಲಕ್ಕೆ ಸಿಕ್ಕಿಬಿದ್ದಿದ್ದಾರೆಂದು ಮನವರಿಕೆ ಆದ್ದರಿಂದ ದಿನಾಂಕ **07–12–2019** ರಂದು ನಾನು ಅಭಿಯೋಜನಾ ಮಂಜೂರಾತಿಯನ್ನು ನೀಡಿದ್ದೇನೆ. ಆ ಅಭಿಯೋಜನೆ ಮಂಜೂರಾತಿಯನ್ನು ನೋಡುತ್ತಿದ್ದು ಅದನ್ನು ನಿಪಿ–**42** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**42**(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಶ್ರೀ ಜೆ.ಎಸ್.ಎಸ್.ವಕೀಲರಿಂದ ಆರೋಪಿತನ ಪರವಾಗಿ:</u>

**2.** ದಿನಾಂಕ **05–11–2019** ರಂದು ನಾನು ಯಾವುದೇ ಕಡತವನ್ನು ಪಡೆದುಕೊಂಡಿಲ್ಲ ಮತ್ತು ಅದನ್ನು ಪರಿಶೀಲನೆ ಮಾಡಿಲ್ಲ ಹಾಗೂ ಅದನ್ನು ಪರಿಶೀಲಿಸಿದಾಗ ನನಗೆ ಆರೋಪಿ ಲಂಚ ಪಡೆದುಕೊಂಡದ್ದು ಮನವರಿಕೆ ಆಯಿತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಯ ಒತ್ತಡಕ್ಕೆ ಮಣಿದು ನಾನು ಸುಳ್ಳು ಅಭಿಯೋಜನಾ ಮಂಜೂರಾತಿಯನ್ನು ನೀಡಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ವಿ.ಸಿ. ಮೂಲಕ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.